UASB LIBRARY
Newspaper Clippings
Pg .1 Monday 12-07-2021 Jai Kisan




# ಲಾಲ್‌ಬಾಗ್‌ನಲ್ಲಿ ಎರೆಹುಳು ಗೊಬ್ಬರ ಘಟಕ

■ **ವಿಕ ಸುದ್ದಿಲೋಕ** ಬೆಂಗಳೂರು

ಲಾಲ್‌ಬಾಗ್ ಉದ್ಯಾನದಲ್ಲಿರುವ ಮರಗಳಿಂದ ಸಂಗ್ರಹವಾಗುವ ತ್ಯಾಜ್ಯ ಮತ್ತು ಎರೆಹುಳಗಳಿಂದ ಗೊಬ್ಬರ ತಯಾರಿಸುವ ಕಾರ್ಯಕ್ಕೆ ತೋಟಗಾರಿಕೆ ಇಲಾಖೆ ಮುಂದಾಗಿದೆ.

ಇದಕ್ಕಾಗಿ ಉದ್ಯಾನದಲ್ಲಿ 50 ಟನ್ ಸಾಮರ್ಥ್ಯದ ತ್ಯಾಜ್ಯ ಉತ್ಪಾದನಾ ಘಟಕವನ್ನು ನಿರ್ಮಿಸಲಾಗಿದೆ. ಉದ್ಯಾನದಲ್ಲಿ ಸಂಗ್ರಹವಾಗುವ ಎಲೆಗಳು, ಗಿಡ-ಮರಗಳಿಂದ ಉದುರುವ ರೆಂಬೆ, ಕೊಂಬೆಗಳು, ಗಿಡಗಳನ್ನು ಟ್ರಿಮ್ ಮಾಡಿದಾಗ ಸಂಗ್ರಹವಾಗುವ ತ್ಯಾಜ್ಯ, ಲಾನ್ ಇತ್ಯಾದಿ ತ್ಯಾಜ್ಯವನ್ನು ಬಳಸಿ ನೈಸರ್ಗಿಕವಾದ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ತ್ಯಾಜ್ಯವನ್ನು ಒಂದು ಹಳ್ಳಕ್ಕೆ ಹಾಕಿ ಕೊಳೆಯುವಂತೆ ಮಾಡಿ ಅದರ ಜತೆಗೆ ಸಗಣಿ ಸೇರಿಸಿ, ಎರೆಹುಳ ಬಿಟ್ಟರೆ ಹಾಗೆಯೇ ಬಿಟ್ಟರೆ ಗೊಬ್ಬರ ಸಿದ್ಧವಾಗುತ್ತದೆ. ಇದನ್ನು ಗಿಡಗಳಿಗೆ ಸ್ವಲ್ಪ ಪ್ರಮಾಣದಲ್ಲಿ ಹಾಕಿದರೂ ಕೂಡ ಒಳ್ಳೆಯ ಪೋಷಕಾಂಶ ಸಿಗುತ್ತದೆ ಎಂದು ರಾಜ್ಯ ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ(ಲಾಲ್‌ಬಾಗ್) ಜಿ. ಕುಸುಮಾ ತಿಳಿಸಿದರು.

ವಾರಕ್ಕೆ ಒಂದೆರಡು ಟ್ರಕ್ ಎಲೆ ಮತ್ತಿತರ ತ್ಯಾಜ್ಯ ಸಂಗ್ರಹವಾಗುತ್ತದೆ. ಚಳಿಗಾಲದಲ್ಲಿ





ದಿನಕ್ಕೆ ಒಂದು ಟ್ರಕ್‌ನಂತೆ ಸಂಗ್ರಹವಾಗುತ್ತದೆ. ಮೂರು ತಿಂಗಳ ಅವಧಿಯಲ್ಲಿ ಗೊಬ್ಬರ ತಯಾರಾಗುತ್ತದೆ ಎಂಬುದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

**ಲೀಫ್ ಕಾಂಪೋಸ್ಟರ್‌ನಿಂದಲೂ ಗೊಬ್ಬರ:** ಲೀಫ್ ಕಾಂಪೋಸ್ಟರ್ ಬಳಸಿಯೂ ಗೊಬ್ಬರ ತಯಾರಿಸಲಾಗುತ್ತಿದೆ. ಕಬ್ಬಿಣದ ತಂತಿ ಮತ್ತು ಸರಳುಗಳ ಐದು ಅಡಿ ಉದ್ದ ಮತ್ತು ಅಗಲದ ಚೌಕಾಕಾರದ ಬಿನ್‌ಅನ್ನು ಲೀಫ್ ಕಾಂಪೋಸ್ಟರ್ ಎಂದು ಕರೆಯಲಾಗುತ್ತದೆ. ಈ ಬಿನ್‌ಗಳಿಗೆ ಮೇಲ್ಭಾಗದಲ್ಲಿ ಮುಚ್ಚಳ ಇದೆ. ಬಿನ್ ಆಕಾರದ ಸಣ್ಣ ಹಳ್ಳ ತೋಡಿ ನೆಲಕ್ಕೆ ಕಲ್ಲು ಹಾಸಿ ಅದರ ಮೇಲೆ ಲೀಫ್ ಕಾಂಪೋಸ್ಟರ್‌ಗಳನ್ನು ಇರಿಸಲಾಗುತ್ತದೆ. ಬಳಿಕ ಸಂಗ್ರಹಿಸಿದ ಎಲೆಗಳನ್ನು ಇದರಲ್ಲಿ ತುಂಬಲಾಗುತ್ತದೆ. ಎಲೆಗಳು ಕೊಳೆಯದಂತೆ ಆಗಾಗ ನಿಗದಿತ ಪ್ರಮಾಣದಲ್ಲಿ ನೀರು ಚಿಮುಕಿಸಲಾಗುತ್ತದೆ. ಈ ಕ್ರಮದಿಂದ 3 ತಿಂಗಳಲ್ಲಿ ಫಲವತ್ತಾದ ಗೊಬ್ಬರ ತಯಾರಾಗುತ್ತದೆ.

12-07-2021 Vk Pg 06

For more information visit
University Library Website
Web - uasbagrilibindia.org
E-mail- librarian@uasbangalore.edu.in

UASB LIBRARY
Newspaper Clippings
Pg .2 Jai Kisan Monday 12-07-2021

# ನೇರಳೆ ಕೃಷಿ ಮಾಡಿ, ಉತ್ತಮ ಆದಾಯ ಗಳಿಸಿ

ಕಾಡುಗಳಲ್ಲಿ, ರಸ್ತೆಯ ಇಕ್ಕೆಲಗಳಲ್ಲಿ, ತೋಟದ ಅಂಚಿನಲ್ಲಿ ಕಂಡುಬರುತ್ತಿದ್ದ ನೇರಳೆ ಈಗ ಅನ್ನದಾತನ ಹೊಲದಲ್ಲಿ ವಾಣಿಜ್ಯ ಬೆಳೆಯ ಸ್ಥಾನ ಪಡೆದಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಎಷ್ಟೋ ಮಂದಿ ರೈತರು ನೇರಳೆ ಹಣ್ಣಿನ ಕೃಷಿಯನ್ನು ಮುಖ್ಯ ಕೃಷಿಯನ್ನಾಗಿ ಮಾಡಿಕೊಂಡಿದ್ದಾರೆ. ಕಡಿಮೆ ನಿರ್ವಹಣೆಯ ಜತೆಗೆ ಹೆಚ್ಚು ನೀರು ಬೇಡದ ನೇರಳೆ, ಭರ್ಜರಿ ಆದಾಯವನ್ನೂ ತಂದುಕೊಡುತ್ತದೆ. ಒಂದು ಎಕರೆಯಲ್ಲಿ ನೇರಳೆ ಕೃಷಿ ಮಾಡಿದ್ರೆ ವರ್ಷಕ್ಕೆ ಆರೇಳು ಲಕ್ಷ ಆದಾಯ ಪಡೆಯಬಹುದು. ನೀರಾವರಿ ಜಮೀನುಗಳಲ್ಲಿ ನೇರಳೆ ಗಿಡಗಳನ್ನು ಹೆಚ್ಚು ಪರಿಶ್ರಮವಿಲ್ಲದೆ ಬೆಳೆಸಬಹುದು. ಗಿಡ ನಾಟಿ ಮಾಡಿದ ಬಳಿಕ ಮೂರ್ನಾಲ್ಕು ವರ್ಷ ಸಮಯಕ್ಕೆ ಸರಿಯಾಗಿ ನೀರು ಗೊಬ್ಬರ ಕೊಟ್ಟರೆ ಸಾಕು, ಬಳಿಕ ಮಳೆಯಾಧಾರಿತವಾಗಿ ಬೆಳೆಯುತ್ತದೆ.

**ನೇರಳೆ ಹಣ್ಣಿಗೆ ಬೇಡಿಕೆ:** ಹಳ್ಳಿಗಳಲ್ಲಿ ಹಿಂದೆಲ್ಲಾ ಸುಲಭವಾಗಿ, ಉಚಿತವಾಗಿ ಸಿಗುತ್ತಿದ್ದ ನೇರಳೆ ಹಣ್ಣಿಗೆ ಈಗ ಭರ್ಜರಿ ಬೆಲೆ ಬಂದಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಕೆ.ಜಿ. ನೇರಳೆ ಹಣ್ಣಿಗೆ ರೂ. 120ರಿಂದ ರೂ. 150 ಬೆಲೆ ಇದೆ. ನೇರಳೆ ಹಣ್ಣಿನ ಔಷಧೀಯ ಗುಣ ಅರಿತಿರುವ ಜನರು ಅದರ ಖರೀದಿಗೆ ಮುಗಿಬೀಳುತ್ತಿದ್ದಾರೆ. ನಗರ- ಪಟ್ಟಣ ಪ್ರದೇಶದಲ್ಲಿ ನೇರಳೆ ಹಣ್ಣಿಗೆ ಸಿಕ್ಕಾಪಟ್ಟೆ ಮಾರುಕಟ್ಟೆ ಸೃಷ್ಟಿಯಾಗಿದೆ. ಸಕ್ಕರೆ ಕಾಯಿಲೆ ಇರುವವರು ಈ ಹಣ್ಣನ್ನು ಹೆಚ್ಚು ಸೇವಿಸುತ್ತಾರೆ. ನೇರಳೆಯಲ್ಲಿ 'ಸಿ' ಜೀವಸತ್ವ, ಸಾರಜನಕ, ನಾರು, ಕಬ್ಬಿಣ, ಕ್ಯಾಲ್ಶಿಯಂ ಅಂಶಗಳಿರುತ್ತವೆ. ನೇರಳೆಯನ್ನು ಮಧುಮೇಹ ಔಷಧ ತಯಾರಿಕೆಯಲ್ಲೂ ಬಳಸಲಾಗುತ್ತದೆ. ಭೇದಿ ಮತ್ತು ಆಮಶಂಕೆಗೆ ನೇರಳೆ ಸಿರಪ್ ಅನ್ನು ಔಷಧವಾಗಿ ಬಳಸಲಾಗುತ್ತದೆ. ವೈನ್ ಜಾಮ್ ಮತ್ತು ಜ್ಯೂಸ್ ತಯಾರಿಕೆಗೂ ಹಣ್ಣು ಬಳಸಲಾಗುತ್ತದೆ.

**ಬೇಸಾಯ ಕ್ರಮ, ಇಳುವರಿ:** ಒಂದು ಎಕರೆ ಭೂಮಿಯಲ್ಲಿ ಸುಮಾರು 50 ನೇರಳೆ ಗಿಡಗಳನ್ನು ನಾಟಿ ಮಾಡಬಹುದು. ನಾಟಿ ಮಾಡಿದ ಮೂರ್ನಾಲ್ಕು ವರ್ಷಗಳಲ್ಲಿ ಇಳುವರಿ ಆರಂಭವಾಗುತ್ತದೆ. ಒಂದು ದೊಡ್ಡ ಗಿಡದಲ್ಲಿ ಸರಾಸರಿ 100ರಿಂದ 120 ಕೆಜಿ ಹಣ್ಣು ಸಿಗುತ್ತದೆ. ಮುಂಗಾರಿನೊಂದಿಗೆ ನೇರಳೆ ಹಣ್ಣಿನ ಸುಗ್ಗಿ ಆರಂಭವಾಗುತ್ತದೆ. ಫೆಬ್ರವರಿ ತಿಂಗಳಲ್ಲಿ ಹೂವು ಬಿಡಲು ಆರಂಭವಾಗುತ್ತದೆ. ಮೇ- ಜುಲೈ ತಿಂಗಳಲ್ಲಿ ಹಣ್ಣು ಸಿಗುತ್ತದೆ. ಉತ್ತಮ ರೀತಿಯಲ್ಲಿ ಕೃಷಿ ಮಾಡಿದರೆ ಒಂದು ಎಕರೆಗೆ ಖರ್ಚು ಕಳೆದು ಆರೇಳು ಲಕ್ಷ ರೂಪಾಯಿ ಆದಾಯ ನಿಶ್ಚಿತ.

**ತಳಿಗಳು, ಕೀಟಬಾಧೆ:** ಕಸಿ ನೇರಳೆ, ಹೈಬ್ರೀಡ್, ಜಂಬು ನೇರಳೆ ಹೀಗೆ ಮೂರು ತಳಿಗಳಿವೆ. ಸೀಡ್‌ಲೆಸ್ ಹಣ್ಣಿನ ತಳಿಯೂ ಇತ್ತೀಚೆಗೆ ಬಾಲ್ತಿಗೆ ಬರುತ್ತಿದೆ. ಪ್ರದೇಶಕ್ಕೆ ಅನುಗುಣವಾಗಿ ಹೊಂದಾಣಿಕೆಯಾಗುವ ತಳಿಗಳು ನರ್ಸರಿಗಳಲ್ಲಿ ಸಿಗುತ್ತವೆ. ಕಾಡು ಮರವಾದ ನೇರಳೆಗೆ ರೋಗ ಬಾಧೆ ಕಡಿಮೆ. ಆದರೆ, ತೋಟಗಾರಿಕೆ ಬೆಳೆಯಾಗಿ ನೇರಳೆ ಬೆಳೆದರೆ ಹಣ್ಣುಕೊಳೆ ರೋಗ, ಹಣ್ಣು ಕೊರಕ, ಎಲೆ ಚುಕ್ಕೆ ರೋಗ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಸೂಕ್ತ ಔಷಧೋಪಚಾರ ಮಾಡಿದರೆ ಸಮಸ್ಯೆ ನಿಭಾಯಿಸಬಹುದು.

**ಇಲ್ಲಿದೆ ಕೃಷಿ ಯೂನಿವರ್ಸಿಟಿ:** ಕೃಷಿಯಲ್ಲಿ ಸಾಧನೆ ಮಾಡಬೇಕು ಅಂದ್ರೆ ಹೊಸ ಕಲಿಕೆ ನಿಮ್ಮದಾಗಬೇಕು. ಈ ನಿಟ್ಟಿನಲ್ಲಿ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ಹಲವು ಕೋರ್ಸ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಮತ್ತು ಕೃಷಿ ಉಪಕಸುಬುಗಳ ಮಾಹಿತಿಯ ಕಣಜವೇ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿದೆ.

**ಕೃಷಿ ಕೋರ್ಸ್‌ಗಳು:** ಹಣ್ಣಿನ ಬೆಳೆಗಳ ಬಗ್ಗೆ ಮಾಹಿತಿ ನೀಡುವ ಡ್ರ್ಯಾಗನ್ ಫ್ರೂಟ್ ಕೋರ್ಸ್, ರಂಬುಟಾನ್ ಕೋರ್ಸ್, ಬಟರ್ ಫ್ರೂಟ್ ಕೋರ್ಸ್, ನೇರಳೆ ಹಣ್ಣಿನ ಕೃಷಿ ಕೋರ್ಸ್, ಹಲಸಿನ ಬಗ್ಗೆ ಕೋರ್ಸ್‌ಗಳು, ತೈವಾನ್ ಸೀಬೆ ಕೋರ್ಸ್, ಅಂಜೂರ ಕೃಷಿ ಕೋರ್ಸ್, ದಾಳಿಂಬೆ ಕೃಷಿ ಕೋರ್ಸ್ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿವೆ. ಇಷ್ಟೇ ಅಲ್ಲ, ರೇಷ್ಮೆ ಕೃಷಿ ಕೋರ್ಸ್, ಸಮಗ್ರ ಕೃಷಿ ಕೋರ್ಸ್, ಅರಣ್ಯ ಕೃಷಿ ಕೋರ್ಸ್, ಅಣಬೆ ಕೃಷಿ ಕೋರ್ಸ್, ಹೂವಿನ ಕೃಷಿ ಕೋರ್ಸ್, ನರ್ಸರಿ ಬಿಸಿನೆಸ್ ಕೋರ್ಸ್ ಮತ್ತು 1 ಎಕರೆ ಕೃಷಿ ಭೂಮಿಯಲ್ಲಿ ಒಂದು ಲಕ್ಷ ಗಳಿಸುವುದು ಹೇಗೆ ಎನ್ನುವ ಬಗ್ಗೆ ಕೋರ್ಸ್‌ಗಳಿವೆ.

**ಕೃಷಿ ಸಂಬಂಧಿತ ಉಪಕಸುಬುಗಳ ಬಗ್ಗೆ ಕೋರ್ಸ್:** ಕೋಳಿ ಸಾಕಣೆ ಕೋರ್ಸ್, ಹಂದಿ ಸಾಕಣೆ ಕೋರ್ಸ್, ಕುರಿ ಮತ್ತು ಮೇಕೆ ಸಾಕಾಣಿಕೆ ಕೋರ್ಸ್, ಮೀನು ಕೃಷಿ ಕೋರ್ಸ್, ಹೈನುಗಾರಿಕೆ ಕೋರ್ಸ್, ಕಡಕ್‌ನಾಥ್ ಕೋಳಿ ಸಾಕಣೆ ಕೋರ್ಸ್, ಜೇನು ಸಾಕಣೆ ಕೋರ್ಸ್, ಸೀಗಡಿ ಕೃಷಿ ಕೋರ್ಸ್, ಗಾಣದ ಎಣ್ಣೆ ಬಿಸಿನೆಸ್ ಕೋರ್ಸ್ ಹೀಗೆ ಹತ್ತು ಹಲವು ವಿಚಾರಗಳ ಬಗ್ಗೆ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ಕೋರ್ಸ್‌ಗಳಿವೆ.



## ಈ ಕೋರ್ಸ್‌ನಲ್ಲಿ ಏನಿದೆ ಮಾಹಿತಿ?

- ಕೋರ್ಸ್‌ನ ಪರಿಚಯ
- ಮಾರ್ಗದರ್ಶಕರ ಪರಿಚಯ
- ಏನಿದು ನೇರಳೆ ಕೃಷಿ?
- ನೇರಳೆ ಕೃಷಿಗೆ ಬೇಕಿರುವ ಬಂಡವಾಳ
- ನೇರಳೆ ಕೃಷಿ ತಳಿಗಳು
- ನೇರಳೆಗೆ ಕೃಷಿ ಮಣ್ಣು ಮತ್ತು ಹವಾಗುಣ
- ನೇರಳೆ ಕೃಷಿಗೆ ನೀರಿನ ಅಗತ್ಯತೆ ಮತ್ತು ಗೊಬ್ಬರ ಪೂರೈಕೆ
- ನೇರಳೆ ಕೃಷಿಗೆ ಭೂಮಿ ತಯಾರಿ, ಕೆಲಸಗಾರರ ಅಗತ್ಯತೆ
- ನೇರಳೆ ಕೃಷಿಯಲ್ಲಿ ಕಳೆ, ಕೀಟಬಾಧೆ ನಿಯಂತ್ರಣ
- ನೇರಳೆ ಹಣ್ಣುಗಳ ಕಟಾವು, ಪ್ಯಾಕಿಂಗ್
- ನೇರಳೆ ಹಣ್ಣುಗಳಿಗೆ ಮಾರುಕಟ್ಟೆ
- ನೇರಳೆ ಕೃಷಿಯಲ್ಲಿ ಆದಾಯ ಮತ್ತು ಲಾಭ
- ನೇರಳೆ ಕೃಷಿಯಲ್ಲಿ ಬೇಡಿಕೆ ಮತ್ತು ಪೂರೈಕೆ
- ನೇರಳೆ ನರ್ಸರಿಗಳು
- ಮಾರ್ಗದರ್ಶಕರ ಸಲಹೆ



## ಮನಿ ಮಾತು



ಆಪ್ತ ಸಲಹೆ

ಸಿ.ಎಸ್. ಸುಧೀರ್

ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com


## ವಿಜಯವಾಣಿ ಓದುಗರಿಗೆ 2,000 ರೂ. ಸ್ಕಾಲರ್‌ಶಿಪ್

ಫೈನಾನ್ಸಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ. VIJAYAVANI ಎಂದು ರೆಫರಲ್ ಕೋಡ್ ಬಳಸಿ, ರೂ. 2000 ಸ್ಕಾಲರ್‌ಶಿಪ್ ಪಡೆಯಿರಿ.


## ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ನೇರಳೆ ಕೃಷಿ ಕೋರ್ಸ್

ನೇರಳೆ ಕೃಷಿ ಬಗ್ಗೆ ಆಸಕ್ತ ಕೃಷಿಕರಿಗೆ ಪರಿಪೂರ್ಣ ಮಾರ್ಗದರ್ಶನ ಸಿಗಬೇಕು ಎನ್ನುವ ಕಾರಣದಿಂದ ಫೈನಾನ್ಸಿಯಲ್ ಫ್ರೀಡಂ ಆ್ಯಪ್‌ನಲ್ಲಿ ನೇರಳೆ ಕೃಷಿ ಕೋರ್ಸ್ ರೂಪಿಸಲಾಗಿದೆ. ನೇರಳೆ ಕೃಷಿಯಲ್ಲಿ ಯಶಸ್ಸು ಕಂಡು ಭರ್ಜರಿ ಆದಾಯ ಗಳಿಸಿರುವ ಮಾರ್ಗದರ್ಶಕರೇ ಈ ಕೋರ್ಸ್‌ನಲ್ಲಿ ನೇರಳೆ ಕೃಷಿ ಬಗ್ಗೆ ವಿವರಣೆ ನೀಡಿದ್ದಾರೆ. ಹಾಗಾದ್ರೆ ಇನ್ನೇಕೆ ತಡ ಈಗಲೇ ಫೈನಾನ್ಸಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ, ನೇರಳೆ ಕೃಷಿ ಬಗ್ಗೆ ಕಲಿತು ನೀವೂ ಆದಾಯ ಗಳಿಸೋಕೆ ಶುರು ಮಾಡಿ.

UASB LIBRARY
Newspaper Clippings
Pg .3 Jai Kisan Monday 12-07-2021

# Strong demand to boost agri input co revenues

## Agrochemicals set to deliver healthy revenue growth; fertilisers stay flat.

We expect agri-input companies to deliver 11% y-o-y revenue growth on the back of strong demand in the export segment in current quarter; higher global commodity prices and favourable comparable in the export segment due to production disruption in April-June 2021.

Our channel checks indicate that all agrochemical companies have passed on the impact of higher raw material prices to the consumers in the quarter. Higher realisation for agri commodities aided in passing higher costs to consumers. Freight costs continued upward trends due to 1) container shortages, 2) backlog of clearance due to the Suez Canal blockage, and 3) slower exports out of China due to the congestion at the Yantian port.

We remain constructive on the contract manufacturing and export-oriented business as the demand environment and order book inflow look robust due to higher global commodity prices resulting in better sowing, and stricter environment compliance in China pushing up the cost curve, making Indian manufacturers competitive.

Key things to watch out for in April-June 2022 earnings: 1) stabilization of the freight costs, 2) cooling off in key intermediates and other raw materials, 3) possible price hikes to compensate for



rising packaging/freight costs. PI Industries continues to be our top pick in the agrochem space, considering 68% growth in CSM business on the back of execution of the order book and ramp-up of new molecules. In our coverage universe, our pecking order is UPL, PI, Rallis India, Dhanuka and Coromandel.

### Agrochemicals

**Favourable trend in exports; domestic business to deliver lower growth due to high base**

We expect agrochemical companies to deliver 10.8% y-o-y revenue growth, driven by PI (+31%), Rallis (+12%) and UPL (+9%). Due to the high base of April-June 2021, we expect Dhanuka's revenue to decline 2% y-o-y. However, we expect its April-June 2022 revenue to deliver 67% growth vs April-June 2020, which is commendable.

We expect domestic brands to grow by 5-6% y-o-y due to the higher base effect. Excluding price inflation of 3%, we expect domestic industry growth of 2-3% in volume terms. We expect EBITDA margins to improve 74bps across our coverage universe.

### Fertilisers

**Volume decline due to higher raw material prices**

Fertiliser industry volumes continued to decline in first quarter. However, after an increase in government subsidy on complex fertilizer in May, NPKS sales picked up from June, which benefitted Coromandel. Imports declined across all categories of fertilisers. Overall volumes declined for diammonium phosphate (-33%), NPKS (-19%) and Urea (-17%) due to higher global fertilizer prices.

We expect Coromandel to report flat overall volumes but expect an 8% increase in manufactured volumes. We expect manufactured EBITDA/ton to decline by 5% due to higher raw material costs.

12-07-2021 Eco times Pg 09

UASB LIBRARY
Newspaper Clippings
Pg .4 Jai Kisan Monday 12-07-2021

# ರಸಗೊಬ್ಬರ ಉತ್ಪಾದನೆಯಲ್ಲಿ ಸ್ವಾವಲಂಬನೆಗೆ ಕ್ರಮ

**ಹುಬ್ಬಳ್ಳಿ:** 'ರಸಗೊಬ್ಬರ ಉತ್ಪಾದನೆಯಲ್ಲಿ ದೇಶ ಸ್ವಾವಲಂಬನೆ ಆಗಬೇಕೆಂಬುದು ಪ್ರಧಾನಿ ನರೇಂದ್ರ ಮೋದಿಯವರ ಆಶಯ. ಐದಾರು ವರ್ಷಗಳಲ್ಲಿ ರಸಗೊಬ್ಬರ ಆಮದು ಸ್ಥಗಿತಗೊಳಿಸಿ, ಸ್ವಾವಲಂಬನೆಗೆ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇರಿಸಿದೆ' ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ತಿಳಿಸಿದ್ದಾರೆ.

ಕೇಂದ್ರದಮೂವರುನೂತನಸಚಿವರೊಂದಿಗೆ 'ಉದಯವಾಣಿ' ಕೈಗೊಂಡ ಸಂವಾದದಲ್ಲಿ ಮಾತನಾಡಿದ ಅವರು, ಯೂರಿಯಾ ರಸಗೊಬ್ಬರ ತಯಾರಿಕೆಯಲ್ಲಿ ಭಾರತ ಬಹುತೇಕವಾಗಿ ಸ್ವಾವಲಂಬನೆ ಸಾಧಿಸಿದೆ. ಡಿಎಪಿ ರಸಗೊಬ್ಬರದ ಒಟ್ಟು ಬೇಡಿಕೆಯಲ್ಲಿ ಶೇ.40 ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಡಿಎಪಿ ಆಮದು ನಿಲ್ಲಿಸಿ ಅದರಲ್ಲೂ ಸ್ವಾವಲಂಬನೆ ಯತ್ನಗಳು ನಡೆದಿವೆ ಎಂದರು.


ದೇಶದಲ್ಲಿ ರಸಗೊಬ್ಬರ ಉತ್ಪಾದನೆ ಐದು ಕಾರ್ಖಾನೆಗಳು ಬಂದ್ ಆಗಿದ್ದವು. ಐದು ಕಾರ್ಖಾನೆಗಳ ಪುನಾರಂಭಕ್ಕೆ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದ್ದು, ಡಿಸೆಂಬರ್ ವೇಳೆಗೆ ಎರಡು, ಏಪ್ರಿಲ್‌ನಲ್ಲಿ ಎರಡು ಸೇರಿ ಒಟ್ಟು ನಾಲ್ಕು ಕಾರ್ಖಾನೆಗಳು ಆರಂಭವಾಗಲಿವೆ. 2023ರಲ್ಲಿ ಇನ್ನೊಂದು ಕಾರ್ಖಾನೆ ರಸಗೊಬ್ಬರ ಉತ್ಪಾದನೆ ಆರಂಭಿಸಲಿದೆ. ಈ ಹಿಂದೆ ರಸಗೊಬ್ಬರದ ಕೊರತೆ ದೇಶದ ಅನೇಕ ಕಡೆ ಕಂಡು ಬರುತ್ತಿತ್ತು. ಕಳೆದ 7 ವರ್ಷಗಳಿಂದ ಒಂದೆರಡು ಕಡೆ ಬಿಟ್ಟರೆ ಕೊರತೆ ಕಂಡು ಬಂದಿಲ್ಲ. ರಸಗೊಬ್ಬರ ಸಾಗಣೆ ಸಮಸ್ಯೆಗಳಿವೆ. ಅದನ್ನು ಸರಿಪಡಿಸಲಾಗುವುದು. ರಾಜ್ಯ ಸರ್ಕಾರಗಳು ಯಾವ ಜಿಲ್ಲೆಗೆ ಎಷ್ಟು ರಸಗೊಬ್ಬರ ಬೇಕೆಂದು ಪ್ರಸ್ತಾವನೆ ಸಲ್ಲಿಸಿದರೆ ಪೂರೈಕೆ ಮಾಡಲಾಗುವುದು. ಜಿಲ್ಲೆ ಮತ್ತು ತಾಲೂಕುವಾರು ರಸಗೊಬ್ಬರ ಬೇಡಿಕೆ ಮಾಹಿತಿ ಪಡೆದು ನಿಖರವಾದ ಪ್ರಸ್ತಾವನೆ ಸಲ್ಲಿಕೆಗೆ ರಾಜ್ಯಗಳಿಗೆ ಸೂಚಿಸಲಾಗಿದೆ. ಕಳಪೆ ರಸಗೊಬ್ಬರ ತಡೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

**ಔಷಧ ಬೆಲೆ ನಿಯಂತ್ರಣ:** ಔಷಧಗಳ ಉತ್ಪಾದನೆಯಲ್ಲಿ ಭಾರತ ವಿಶ್ವಕ್ಕೆ ಚಾಂಪಿಯನ್ ಆಗಿದೆ. ಬಡವರು ಸೇರಿ ಜನರ ಆರೋಗ್ಯ ಕಾಳಜಿಯೊಂದಿಗೆ ಕಡಿಮೆ ದರದಲ್ಲಿ ಔಷಧ, ವೈದ್ಯಕೀಯ ಸಲಕರಣೆಗಳು ದೊರೆಯಬೇಕೆಂಬ ಉದ್ದೇಶದೊಂದಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಔಷಧ ಬೆಲೆ ನಿಯಂತ್ರಣ ಕ್ರಮ ಕೈಗೊಂಡಿದೆ. ಹಿಂದಿನ ಯುಪಿಎ ಸರ್ಕಾರದಲ್ಲಿ ಬೆಲೆ ನಿಯಂತ್ರಣವೇ ಇರಲಿಲ್ಲ 2007-08ರಲ್ಲಿ ದೇಶದಲ್ಲಿ 86 ಜನೌಷಧ ಕೇಂದ್ರಗಳಿದ್ದವು. ಪ್ರಧಾನಿಯವರ ವಿಶೇಷ ಕಾಳಜಿಯೊಂದಿಗೆ ಕಳೆದ 7 ವರ್ಷಗಳಲ್ಲಿ ದೇಶದಲ್ಲಿ ಸುಮಾರು 7900 ಜನೌಷಧ ಕೇಂದ್ರಗಳು ಆರಂಭವಾಗಿವೆ ಎಂದರು.

ನಿರುದ್ಯೋಗ ಯುವಕ-ಯುವತಿಯರಿಗೆ ಸಿಪೆಟ್ ಸಂಸ್ಥೆ ಮೂಲಕ ತರಬೇತಿ ಹಾಗೂ ಉದ್ಯೋಗವಕಾಶ ದೊರಕಿಸಲಾಗುವುದು. ಯುಪಿಎ 10 ವರ್ಷಗಳಲ್ಲಿ 70 ಸಾವಿರ ಯುವಕರಿಗೆ ತರಬೇತಿ ನೀಡಿದ್ದರೆ, ಎನ್‌ಡಿಎ ಸರ್ಕಾರ 5 ವರ್ಷಗಳಲ್ಲಿ 4.86 ಲಕ್ಷ ಯುವಕರಿಗೆ ತರಬೇತಿ ನೀಡಿ, ಉದ್ಯೋಗವಕಾಶ ಕಲ್ಪಿಸಿದೆ ಎಂದರು.

## ರಾಜ್ಯದಲ್ಲಿ 2 ಸೋಲಾರ್ ಪಾರ್ಕ್ ಸ್ಥಾಪನೆಗೆ ಯತ್ನ

ನವೀಕರಿಸಬಹುದಾದ ಇಂಧನ ಮೂಲಗಳ ಸಮರ್ಪಕ ಬಳಕೆ ಆಗತ್ಯವಿದೆ. ಸೌರ ವಿದ್ಯುತ್ ಶಕ್ತಿ ಉತ್ಪಾದನೆಗೆ ಕರ್ನಾಟಕ ಹಾಗೂ ಕೇರಳದಲ್ಲಿ ಉತ್ತಮ ಅವಕಾಶವಿದೆ. ರಾಜ್ಯದ ಪಾವಗಡದಲ್ಲಿ ಸುಮಾರು 12 ಸಾವಿರ ಎಕರೆ ಪ್ರದೇಶದಲ್ಲಿ ಸೋಲಾರ ಪಾರ್ಕ್ ನಿರ್ಮಾಣ ಮಾಡಲಾಗಿದೆ. ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ಜಮೀನನ್ನು ರಾಜ್ಯ ಸರ್ಕಾರಗಳೇ ನೀಡಬೇಕು. ರಾಜ್ಯದಲ್ಲಿ ಇನ್ನೂ ಎರಡು ಸೋಲಾರ್ ಪಾರ್ಕ್‌ಗಳ ನಿರ್ಮಾಣ ನಿಟ್ಟಿನಲ್ಲಿ ಸಿಎಂ ಜತೆ ಚರ್ಚಿಸುತ್ತೇನೆ. ಅದೇ ರೀತಿ ಕೇರಳದ ಮುಖ್ಯಮಂತ್ರಿಯೊಂದಿಗೂ ಚರ್ಚಿಸುತ್ತೇನೆ. ಕಳೆದ ಏಳು ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆ ಅಧಿಕವಾಗಿದ್ದು, ಕರ್ನಾಟಕ ನೆರೆ ರಾಜ್ಯಗಳಿಗೆ ಹೆಚ್ಚುವರಿ ವಿದ್ಯುತ್ ನೀಡತೊಡಗಿದೆ. ರೈತರಿಗೆ ಮೂರು ಫೇಸ್ ಗುಣಮಟ್ಟದ ವಿದ್ಯುತ್ ನೀಡಲಾಗುತ್ತಿದೆ. ವಿದ್ಯುತ್ ಉತ್ಪಾದನೆ ಹೆಚ್ಚಳ ನಿಟ್ಟಿನಲ್ಲಿ ಸೌರಶಕ್ತಿ, ಪವನಶಕ್ತಿ ಸೇರಿದಂತೆ ನವೀಕರಿಸಬಹುದಾದ ಇಂಧನ ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. ಇದರ ಮೂಲಕ ಮುಂದಿನ ಐದು ವರ್ಷಗಳಲ್ಲಿ ಭಾರತ ಗ್ರೀನ್ ಎನರ್ಜಿ ದೇಶವಾಗಿಸುವ ಪ್ರಧಾನಿ ನರೇಂದ್ರ ಮೋದಿ ಆಶಯವನ್ನು ಅನುಷ್ಠಾನಕ್ಕೆ ತರಲಾಗುವುದು ಎಂದು ಸಚಿವ ಖೂಬಾ ತಿಳಿಸಿದರು.



ಉದಯವಾಣಿ ಆನ್‌ಲೈನ್ ಸಂವಾದ

**ನನ್ನ ಆಡಳಿತದಲ್ಲಿ ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶ ನೀಡುವುದಿಲ್ಲ. ಪಾರದರ್ಶಕ ಆಡಳಿತಕ್ಕೆ ಒತ್ತು ನೀಡುವೆ. 'ಕಾಯಕ ಸಂಸ್ಕೃತಿ'ಗೆ ನನಗೆ ಪ್ರಧಾನಿ ನರೇಂದ್ರ ಮೋದಿ ಪ್ರೇರಣೆಯಾಗಿದ್ದಾರೆ. ಬೀದರ ಜಿಲ್ಲೆಗೆ ಬಂಡವಾಳ ಹೂಡಿಕೆದಾರರ ಆಕರ್ಷಣೆಯೊಂದಿಗೆ ಉದ್ಯೋಗ ಸೃಷ್ಟಿಗೆ ಕ್ರಮ ಕೈಗೊಳ್ಳುತ್ತೇನೆ.**

* **ಭಗವಂತ ಖೂಬಾ,** ಹೊಸ, ನವೀಕರಿಸ ಬಹುದಾದ ಇಂಧನ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ

### ಉದ್ಯೋಗ ಸೃಷ್ಟಿ ಯೋಜನೆ

ಬೀದರ ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಸುವಂಥ ಮತ್ತು ಅಭಿವೃದ್ಧಿಗೆ ಪೂರಕವಾಗಬಲ್ಲ ಕೈಗಾರಿಕೆಗಳ ಸ್ಥಾಪನೆಗೆ ಪ್ರಯತ್ನಿಸುವುದಾಗಿ ಕೇಂದ್ರ ಸಚಿವ ಭಗವಂತ ಖೂಬಾ ಮಾಹಿತಿ ನೀಡಿದರು.

**ವೆಬಿನಾರ್‌ನಲ್ಲಿ ನಡೆದ ಸಂವಾದ ವೀಕ್ಷಿಸಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ**